ರಾಮ್‌ಧರಿ ಸಿಂಗ್ ದಿನಕರ್, ಚಂದ್ರವದನ ಮೆಹ್ತಾ ಅವರಂತಹ ಕವಿಗಳು, ಜ್ಯೋತೀಂದ್ರ ಧವೆ ಮುಂತಾದ ಪ್ರಸಿದ್ಧ ಲೇಖಕರು ಕೂಡ ಮನೆಗೆ ಬರುವುದಿತ್ತು. ಅಕ್ಕ ಆರತಿ ಮತ್ತು ತಮ್ಮ ಅನುಜ್ ಅವರಿಬ್ಬರೂ ಸ್ವಲ್ಪ ಮೌನಿಗಳು. ನಾನು ಹಾಗಲ್ಲ. ವಾಚಾಳಿಯಾಗಿ, ಎಲ್ಲರೊಡನೆ ಮಾತನಾಡುತ್ತ, ತನಗೆ ಇಂತಹದ್ದೇ ಬೇಕು ಎಂದು ಹಟ ಮಾಡುತ್ತ, ಮನೆಯಿಡೀ ಗಲಾಟೆ ಎಬ್ಬಿಸುತ್ತ ಓಡಾಡುತ್ತಿದ್ದೆ. ನನ್ನ ಎಲ್ಲ ಅಧ್ವಾನಗಳಿಗೂ ಅಜ್ಜನ ಪೂರ್ಣ ಬೆಂಬಲ ಇರುತ್ತಿತ್ತು. ನಾನು ಅವರ ಪ್ರೀತಿಯ 'ಸೋನ್ಯಾ' ಆಗಿದ್ದೆ. ಅಪ್ಪ ಅಮ್ಮ ಕೂಡ ಸಂಗೀತ, ಕಲೆಯ ಬಗ್ಗೆ ಅಪಾರ ಗೌರವ ಹೊಂದಿದವರು. ನನ್ನ ಅಮ್ಮ ಕಸ್ತೂರಿ ಪಕ್ವಾಸ್ ಮುಂಬೈಯ ಎಸ್‌ಎನ್‌ಡಿಟಿ ಕಾಲೇಜಿನಲ್ಲಿ ಸಂಗೀತದಲ್ಲಿಯೇ ಪದವಿ ಪಡೆದವರು. ಅಪ್ಪ ಕೂಡ ಶಾಸ್ತ್ರೀಯ ಸಂಗೀತ ಕಲಿತಿದ್ದರು. ನಾನು ಕೂಡ ಆಗ್ರಾ ಘರಾನಾದ ಕೆ.ಜಿ. ಗಿಂಡೆ, ಡಾ. ಸುಮತಿ ಮುತತ್ಕರ್ ಅವರಿಂದ ಸಂಗೀತ ಪಾಠ ಕಲಿತಿದ್ದೇನೆ. ಉಸ್ತಾದ್ ವಿಲಾಯ್ ಖಾನ್ ಅವರ ಶಿಷ್ಯ ದೇಬ್ ಬರ್ಮನ್ ನನಗೆ ಸಿತಾರ್ ನುಡಿಸಲು ಹೇಳಿಕೊಟ್ಟರು. ವೆಂಕಟ್‌ರಾಮನ್ ಅವರು ಕರ್ನಾಟಕ ಸಂಗೀತವನ್ನು ಕಲಿಸಿದ್ದರು. ಹೀಗೆಯೇ ನೃತ್ಯವೂ ನನಗೆ ನಾಲ್ಕನೇ ವಯಸ್ಸಿನಲ್ಲಿಯೇ ಪರಿಚಯವಾಯಿತು. ರಾಬಿನ್ ರಾಯ್ ಅವರಿಂದ ಮಣಿಪುರಿ ಕಲಿಯಲು ಶುರು ಮಾಡಿದ್ದೆ. ಶಾಲೆಯಿಂದ ಓಡಿ ಬಂದವಳೇ ಡಾನ್ಸ್‌ಗೆ ಸದಾ ಸಿದ್ಧ. ಆದರೆ ಸಂಗೀತ ಕ್ಲಾಸ್ ಇದೆಯೆಂದರೆ ಏನಾದರೂ ನೆಪ ಹೇಳಿ, ತಪ್ಪಿಸಿಕೊಳ್ಳುತ್ತಿದ್ದೆ. ನೃತ್ಯ ತರಗತಿಗಳೆಂದರೆ ಊರಿಗೆ ಮುಂಚೆ ಸಿದ್ಧವಾಗಿ ನಿಂತಿರುತ್ತಿದ್ದೆ. ಶ್ರೀಮಂತ ಮನೆಯಲ್ಲಿ ವಾಸವಿದ್ದೆ ಎಂದರೆ ನನ್ನ ಚಿಕ್ಕಪುಟ್ಟ ಖುಷಿಗಳಿಗೆ ತೊಡಕೇನೂ ಇರಲಿಲ್ಲ. ಶಾಲೆಯ ಬಿಡುವಿನಲ್ಲಿ ಓಡಿ ಹೋಗಿ, ಉಪ್ಪು ಮೆಣಸು ಸವರಿದ ಮಾವಿನಕಾಯಿ ಚೂರು ಖರೀದಿಸುವುದು, ಹುಳಿ ಹುಳಿ ಇಮ್ಲಿ ತಿನ್ನುವುದು, ಟ್ರಾಮ್ ಹತ್ತಿ ಮನೆಗೆ ಬರುವುದು, ಡಬಲ್ ಡೆಕ್ಕರ್ ಬಸ್ಸಿನಲ್ಲಿ ಸೀಟಿಗಾಗಿ ಜಗಳಾಡುವುದು... ಹೀಗೆ ಖುಷಿಗಳೇನೂ ಕೈ ತಪ್ಪಿ ಹೋಗಲಿಲ್ಲ.

ಜನ್ಮಾಷ್ಟಮಿ ಸಂದರ್ಭದಲ್ಲಿ ನಾವು ತುಸು ರೌಡಿ ಸ್ವಭಾವದ ಹುಡುಗಿಯರೆಲ್ಲ ಸೇರಿ, ಹುಡುಗರಿಗೆ ಕಿರುಕುಳ ಕೊಡುತ್ತಿದ್ದೆವು. ಮೊಸರು ಕುಡಿಕೆ ಉತ್ಸವದಲ್ಲಿ ಮಲ್ಲಕಂಬ ರಚಿಸಿ ಬೆಣ್ಣೆ ಮತ್ತು ಕಾಯಿನ್ ಗೆಲ್ಲುವ ಪಂಥವಿರುತ್ತಿತ್ತಲ್ಲ, ನಾವು ಹುಡುಗರಿಗೆ ತೊಂದರೆ ಕೊಟ್ಟು ಅವರ ಮಲ್ಲಕಂಬವನ್ನು ಬೀಳಿಸಿಬಿಡುತ್ತಿದ್ದೆವು. ಕೊನೆಗೆ ಮೊಸರು ಕುಡಿಕೆಯಲ್ಲಿ ಗೆದ್ದ ತಂಡವು, ಗಡಿಗೆ ಬೆಣ್ಣೆಯನ್ನು ತಿನ್ನಬಹುದು, ಕಾಯಿನ್ ಹುಡುಗಿಯರಿಗೆ ಕೊಡಬೇಕು ಎಂಬ ಶರ್ತದೊಂದಿಗೆ ಹುಡುಗರಿಗೆ ಅವಕಾಶ ಕಲ್ಪಿಸುತ್ತಿದ್ದೆವು.

ಪದವಿ ಓದಲು ಜರ್ಮನಿಯ ಎಫಿಸ್ಟನ್ ಕಾಲೇಜಿಗೆ ತೆರಳು ವೇಳೆಗೆ, ಬಾಲ್ಯ ಕಳೆದು ಟೀನೇಜ್‌ಗೆ ಕಾಲಿಡುವ ಹೊತ್ತಿಗೆ – ಇತಿಹಾಸ, ಫಿಲಾಸಫಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಅಜ್ಜನ ಬಳಿ ಕೇಳುತ್ತಿದ್ದೆ.

**◆ ಹಾಗಾದರೆ ನಿಮ್ಮ ಕಲಿಕೆಯ ಹಾದಿ, ಸಾಧನೆಯ ಹಾದಿಯಲ್ಲಿ ಸವಾಲುಗಳು ಎದುರಾಗಲಿಲ್ಲವೇ?**

ಸವಾಲುಗಳಿಲ್ಲದ ಕ್ಷಣಗಳೂ ಇಲ್ಲ. ಕ್ಷೇತ್ರವೂ ಇಲ್ಲ. ಆದರೆ ಈ ಸವಾಲುಗಳೇ ನಮ್ಮನ್ನು ರೂಪಿಸುವುದು ಎಂಬುದನ್ನು ಮರೆಯುವಂತಿಲ್ಲ. ರಾಜಸ್ಥಾನದಲ್ಲಿ ಮಹಿಳೆಯರು ಎಷ್ಟೋ ಮೈಲುಗಟ್ಟಲೆ ದೂರದಿಂದ ಎರಡು ನೀರಿನ ಕೊಡಪಾನವನ್ನು ತಲೆಯಲ್ಲಿ ಮತ್ತು ಸೊಂಟದಲ್ಲಿ ಹೊತ್ತು ತರುತ್ತಾರೆ. ಕೈತುಂಬ ಬಳೆ, ಕಿವಿ ಮತ್ತು ಕತ್ತಿಗೆ ಭಾರವಾದ ಬೆಳ್ಳಿಯ ಆಭರಣ, ಸೊಂಟಕ್ಕೆ ಆಭರಣ ಧರಿಸಿರುತ್ತಾರೆ. ಅವರ ನಡಿಗೆಯನ್ನು ಗಮನಿಸಿದರೆ ಅದೊಂದು ಮುಕ್ತ ಭಾವ, ಲಾಲಿತ್ಯದ ನಡಿಗೆಯಾಗಿರುತ್ತದೆ. ಅಂದರೆ ಅಡಚಣೆಗಳನ್ನು ನಾವು 'ಅಡಚಣೆ'ಗಳೆಂದು ಹೆಸರಿಸುತ್ತ ಕುಳಿತರೆ ಅದನ್ನು ದಾಟುವುದು ಸಾಧ್ಯವಾಗುವುದಿಲ್ಲ. ಅಡಚಣೆಗಳು ನಮ್ಮ ದೃಢತೆಯನ್ನು ಇನ್ನಷ್ಟು ಭದ್ರ ಮಾಡಬೇಕು. ನನ್ನ ಪಾಲಿಗೆ ಬಂದ ಅನೇಕ ಸವಾಲುಗಳು ನನ್ನನ್ನು ರೂಪಿಸಿದವು.

ನಾವು ಒಳ್ಳೆಯ ವ್ಯಕ್ತಿಯಾಗಿ ಬೆಳೆಯಲು, ವಿಕಾಸ ಹೊಂದಲು ಈ ಸವಾಲುಗಳೇ ಸಹಾಯ ಮಾಡುತ್ತವೆ. ಒಡಿಸ್ಸಿ ನೃತ್ಯದಲ್ಲಿಯೂ ಸುಮಾರು ನಾಲ್ಕು ಕಿಲೋ ಭಾರದ ಬೆಳ್ಳಿಯ ಆಭರಣವನ್ನು ಧರಿಸಬೇಕಾಗಿತ್ತು. ಎರಡೂವರೆ ಗಂಟೆಗಳ ನೃತ್ಯ ಪ್ರದರ್ಶನದಲ್ಲಿ ನಮ್ಮ ತಲ್ಲೀನತೆ ಹೇಗಿರಬೇಕೆಂದರೆ, ಇಷ್ಟೊಂದು ಆಭರಣ ಧರಿಸಿದ್ದೇನೆ ಎಂಬ ಆಲೋಚನೆಯೇ ಬರಬಾರದು. ವೇದಿಕೆಯಲ್ಲಿ ನಾನು ಚಿಟ್ಟೆಯಂತೆ, ಹಕ್ಕಿಯಂತೆ ಹಗುರಾಗುತ್ತಾ ಹೋಗುತ್ತೇನೆ. ನೃತ್ಯವು ಕಲಿಕೆಯಿಂದ